ಸೇತುವೆ ಪುನರ್‌ನಿರ್ಮಾಣ ಕಾಮಗಾರಿ ಕೈಗೊಳ್ಳುವ ಪ್ರಸ್ತಾವನೆಯು ಸರ್ಕಾರದ ಪರಿಶೀಲನೆಯಲ್ಲಿದೆ.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	:	**(192)243**
ಮಾನ್ಯ ಸದಸ್ಯರ ಹೆಸರು	:	**ಶ್ರೀ ಪ್ರತಾಪಗೌಡ ಪಾಟೀಲ್(ಮಸ್ಕಿ)**
ಉತ್ತರಿಸುವ ಸಚಿವರು	:	**(ಶ್ರೀ ಸಿ.ಎಂ.ಉದಾಸಿ)**
	:	**ಮಾನ್ಯ ಲೋಕೋಪಯೋಗಿ ಸಚಿವರು**

ಅ) ಬೀದರ್ – ಶ್ರೀರಂಗಪಟ್ಟಣ ಹೆದ್ದಾರಿಯಲ್ಲಿ ಬರುವ ಲಿಂಗಸಗೂರು–ಸಿಂಧನೂರ ಮಧ್ಯದ ರಸ್ತೆ ಸಂಪೂರ್ಣ ಹಾಳಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಬಂದಿದೆ

ಆ) ಹಾಗಿದ್ದಲ್ಲಿ, ಇದರ ದುರಸ್ಥಿಗಾಗಿ ಸರ್ಕಾರ ಕೈಗೊಂಡ ಕ್ರಮವೇನು?

ಸದರಿ ರಸ್ತೆಯ ಕಿ.ಮೀ.421.00 ರಿಂದ 437.00ರ ವರೆಗಿನ ಭಾಗವು ತುಂಗಭದ್ರ ಅಚ್ಚುಕಟ್ಟು ಪ್ರದೇಶದಲ್ಲಿ ಹಾದು ಹೋಗುತ್ತದೆ. ಈ ಪ್ರದೇಶದಲ್ಲಿ ರಸ್ತೆಯ ಎರಡು ಬದಿಗಳಲ್ಲಿ ಭತ್ತದ ಗದ್ದೆಗಳಿದ್ದು ಕಿ.ಮೀ 427.00 ರಿಂದ 437.00 ವರೆಗಿನ ರಸ್ತೆಯ (ಲಿಂಗಸಗೂರು–ಸಿಂಧನೂರು ಮಧ್ಯದ ರಸ್ತೆ) ಕೆಲಭಾಗಗಳು ಕುಸಿದಿರುತ್ತವೆ. ಆದ ಕಾರಣ ಈ ಭಾಗಗಳನ್ನು ಮರುನಿರ್ಮಾಣ ಮಾಡುವುದು ಅವಶ್ಯವಿರುತ್ತದೆ.

ಸದರಿ ರಾಜ್ಯ ಹೆದ್ದಾರಿಯ ನಿರ್ವಹಣೆಯನ್ನು ಕರ್ನಾಟಕ ರಸ್ತೆ ಅಭಿವೃದ್ಧಿ ನಿಗಮ ನಿಯಮಿತದ ವತಿಯಿಂದ OPRMC(Output and Performance based Road Maintenance Contract) ಆಧಾರದ ಮೇಲೆ ಕೈಗೊಳ್ಳಲು ಕ್ರಮ ಕೈಗೊಳ್ಳಲಾಗಿದೆ. ಟೆಂಡರ್ ಪ್ರಕ್ರಿಯೆ ಪ್ರಗತಿಯಲ್ಲಿದೆ.

1. ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	:	**(458)244**
2. ಸದಸ್ಯರ ಹೆಸರು	:	**ಶ್ರೀ ಪುಟ್ಟರಾಜು ಸಿ.ಎಸ್. (ಮೇಲುಕೋಟೆ)**
3. ಉತ್ತರಿಸುವ ಸಚಿವರು	:	**(ಡಾ: ವಿ.ಎಸ್.ಆಚಾರ್ಯ)**
	:	**ಮಾನ್ಯ ಗೃಹ ಸಚಿವರು**

ಅ. ಮಂಡ್ಯ ಜಿಲ್ಲೆ ಪಾಂಡವಪುರ ತಾಲ್ಲೂಕಿನಲ್ಲಿರುವ ಅರಕ್ಷಕ ಠಾಣೆಗಳ ಸಂಖ್ಯೆ ಎಷ್ಟು? (ವಿವರಗಳನ್ನು ನೀಡುವುದು)

ಪಾಂಡವಪುರ ತಾಲ್ಲೂಕಿನಲ್ಲಿ 01 ಪೊಲೀಸ್ ಠಾಣೆ ಹಾಗೂ 02 ಪೊಲೀಸ್ ಹೊರಠಾಣೆಗಳಿರುತ್ತವೆ. ವಿವರಗಳು ಈ ಕೆಳಗಿನಂತಿವೆ.

1. ಪಾಂಡವಪುರ ಪೊಲೀಸ್ ಠಾಣೆ